# ರೊಬೋಟಿಕ್ ಹಿಪ್ ರಿಪ್ಲೇಸ್‌ಮೆಂಟ್ ಸರ್ಜರಿ



**ದೀರ್ಘಕಾಲದಿಂದ ವಿಪರೀತ ಸೊಂಟ ನೋವು ಅನುಭವಿಸುತ್ತಿರುವವರಿಗೆ ರೊಬೋಟಿಕ್ ಹಿಪ್ ರಿಪ್ಲೇಸ್‌ಮೆಂಟ್ ಸರ್ಜರಿ ವರದಾನ.**

**ಉಮಾ ಅನಂತ್**

ಮಲೇಷ್ಯಾ ಮೂಲದ 53 ವರ್ಷದ ಸಾಫ್ಟ್‌ವೇರ್ ಎಂಜಿನಿಯರ್‌ಗೆ ದೀರ್ಘಕಾಲದಿಂದ ವಿಪರೀತ ಸೊಂಟ ನೋವು. ಮೂರು ವರ್ಷದ ಹಿಂದೆ ಕೋವಿಡ್ ಸೋಂಕಿಗೆ ಒಳಗಾಗಿದ್ದ ಈ ಎಂಜಿನಿಯರ್‌ಗೆ ವಿಪರೀತ ಆ್ಯಂಟಿಬಯೊಟಿಕ್ ಸೇವಿಸಿದ್ದರಿಂದ ಅಡ್ಡಪರಿಣಾಮ ಉಂಟಾಗಿ ಸೊಂಟ ನೋವು ಬಾಧಿಸುತ್ತಿತ್ತು. ವೈದ್ಯಕೀಯ ಪರಿಭಾಷೆಯಲ್ಲಿ 'ಅವಾಸ್ಕ್ಯುಲರ್ ನೆಕ್ರೊಸಿಸ್' ಎಂದು ಕರೆಯಲಾಗುವ ಈ ರೀತಿಯ ಸೊಂಟ ನೋವು ನಿವಾರಣೆಗಾಗಿ ಇವರು ಹಲವು ದೊಡ್ಡ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆದರೂ ಪ್ರಯೋಜನಕಾರಿಯಾಗಿರಲಿಲ್ಲ. ಜೊತೆಗೆ ನೋವು ತಡೆಯಲಾಗದೇ ಇದ್ದಾಗ ಸೊಂಟದ ಶಸ್ತ್ರಚಿಕಿತ್ಸೆಯನ್ನೂ ಮಾಡಿಸಿಕೊಂಡಿದ್ದರು. ಆದರೆ ಫಲಿತಾಂಶ ಮಾತ್ರ ಶೂನ್ಯವೇ ಆಗಿತ್ತು. ನೋವಿನ ಕಾಟದಿಂದ ಮುಕ್ತಿ ಸಿಗಲೇ ಇಲ್ಲ.

ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಇತ್ತೀಚೆಗೆ ಚಿಕಿತ್ಸೆಗಾಗಿ ಬಂದಾಗ ಇವರನ್ನು ತಪಾಸಣೆ ಮಾಡಿದ ವೈದ್ಯರು ರೊಬೋಟಿಕ್ ಹಿಪ್ ರಿಪ್ಲೇಸ್‌ಮೆಂಟ್ ಸರ್ಜರಿಯ ಬಗ್ಗೆ ಮಾಹಿತಿ ನೀಡಿದರು. ಇದಕ್ಕೊಪ್ಪಿದ ರೋಗಿಗೆ ಅತ್ಯಾಧುನಿಕ ಹಿಪ್ ರಿಪ್ಲೇಸ್‌ಮೆಂಟ್ ಸರ್ಜರಿ ಮಾಡಲಾಯಿತು. ಈಗ ಇವರು ಸಂಪೂರ್ಣ ಚೇತರಿಸಿಕೊಂಡಿದ್ದು, ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದಿದೆ.

'ತೀವ್ರ ಸೊಂಟ ನೋವಿಗೆ ಒಳಗಾಗಿದ್ದ ಈ ಎಂಜಿನಿಯರ್ ಆಸ್ಪತ್ರೆಗೆ ಬರುವಾಗ ನಡೆದಾಡಲೂ ತ್ರಾಸ ಪಡುತ್ತಿದ್ದರು. ರೊಬೋಟಿಕ್ ಸರ್ಜರಿಯ ಬಗ್ಗೆ ತಿಳಿಹೇಳಿದ ನಂತರ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು. ಈಗ ಗುಣಮುಖರಾಗಿದ್ದು ತಮ್ಮೂರಿಗೆ ಮರಳಿದ್ದಾರೆ' ಎಂದು ವಿವರ ನೀಡುತ್ತಾರೆ ಫೋರ್ಟಿಸ್ ಆಸ್ಪತ್ರೆಯ ಮೂಳೆ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ. ನಾರಾಯಣ್ ಹುಲ್ಸೆ ಅವರು.

'ಸರ್ಜರಿಯ ಬಳಿಕ ರೋಗಿ ವೇಗವಾಗಿ ಗುಣಮುಖನಾಗಲು ಕಾರಣವಾದದ್ದು ಅತ್ಯಾಧುನಿಕ ರೊಬೋಟಿಕ್ ತಂತ್ರಜ್ಞಾನದಿಂದ ಮಾಡಿದ ಚಿಕಿತ್ಸೆ' ಎನ್ನುವ ಅವರು, ಇವರಿಗೆ ಸೊಂಟದ ಎರಡೂ ಭಾಗಗಳಲ್ಲೂ ತೊಂದರೆಯಿತ್ತು. ದೀರ್ಘಕಾಲದ ಇವರ ತೊಂದರೆ ನಿವಾರಿಸಲು ಹಾಗೂ ರೋಗಿಯ ಜೀವನಮಟ್ಟ ಸುಧಾರಿಸಲು ಹಿಪ್ ರಿಪ್ಲೇಸ್‌ಮೆಂಟ್ ಸರ್ಜರಿ ಅನಿವಾರ್ಯವಾಗಿತ್ತು' ಎಂದು ಹೇಳುತ್ತಾರೆ.

## ಏನಿದು ಹಿಪ್ ರಿಪ್ಲೇಸ್‌ಮೆಂಟ್?

ರೊಬೋಟಿಕ್ ಹಿಪ್ ರಿಪ್ಲೇಸ್‌ಮೆಂಟ್ ಸರ್ಜರಿಯು ಅತ್ಯಾಧುನಿಕ ವೈದ್ಯಕೀಯ ಶಸ್ತ್ರಚಿಕಿತ್ಸಾ ವಿಧಾನವಾಗಿದ್ದು, ರೋಗಿ ಬೇಗನೆ ಚೇತರಿಸಿಕೊಳ್ಳಲು ಸಹಕಾರಿಯಾಗಿದೆ. ಸೊಂಟ ನೋವು ವಿಪರೀತ ಆದಾಗ, ಔಷಧಿ, ಫಿಸಿಯೊಥೆರಪಿ ಹೀಗೆ ಯಾವುದೇ ರೀತಿಯ ಔಷಧಿಗಳಿಂದ, ಶಸ್ತ್ರಚಿಕಿತ್ಸಕವಲ್ಲದ ಎಲ್ಲ ರೀತಿಯ ಚಿಕಿತ್ಸೆಗಳಿಂದಲೂ ಗುಣ ಕಾಣದೇ ಇದ್ದಾಗ, ಬಿದ್ದು ಸೊಂಟ ಮುರಿದ ಪರಿಸ್ಥಿತಿಯಲ್ಲಿ, ಬದಲಿ ಹಿಪ್ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ.

ಕೆಲವು ಪ್ರಮುಖ ಕಾರಣಗಳಿಂದ ವಿಪರೀತ ಸೊಂಟ ನೋವು ಬರುತ್ತದೆ. ಅಸ್ಥಿಸಂಧಿವಾತ, ರುಮಟಾಯ್ಡ್ ಸಂಧಿವಾತ, ಉರಿಯೂತ ಸಂಧಿವಾತ ಮುಂತಾದವುಗಳಿಂದ ಸೊಂಟದ ಮೂಳೆಯ ಸವೆಯ ಉಂಟಾಗಬಹುದು. ಇದರಿಂದ ನೋವು ಹೆಚ್ಚಿ ಓಡಾಡಲೂ ಆಗದಂತಹ ಪರಿಸ್ಥಿತಿ ಉಂಟಾಗುತ್ತದೆ. ಆಗ ಬದಲಿ ಹಿಪ್ ಸರ್ಜರಿ ಮಾಡಿಸಿಕೊಳ್ಳಬೇಕಾಗುತ್ತದೆ.

ಅಪಘಾತವಾಗಿ ಸೊಂಟದ ಮೂಳೆ ಮುರಿದ ಸಂದರ್ಭದಲ್ಲಿ, ಬಾತ್‌ರೂಮ್ ಮತ್ತಿತರೆಡೆ ಜಾರಿ ಬಿದ್ದು ಸೊಂಟದ ಮೂಳೆ ಮುರಿತ ಉಂಟಾದಾಗ, ಕ್ರೀಡಾಳುಗಳು ಆಟದ ಮೈದಾನದಲ್ಲಿ ಬಿದ್ದು ಸೊಂಟಕ್ಕೆ ವಿಪರೀತ ಏಟು ಬಿದ್ದ ಸಂದರ್ಭದಲ್ಲಿ, ವಯಸ್ಸಾದವರಲ್ಲಿ ಮೂಳೆ ಸವಕಳಿ ಆಗಿದ್ದಲ್ಲಿ, ಹಿಂದೆ ಶಸ್ತ್ರಚಿಕಿತ್ಸೆ ಮಾಡಿದ್ದು ವಿಫಲವಾಗಿದ್ದಲ್ಲಿ ಮತ್ತೆ ಬದಲಿ ಹಿಪ್ ಸರ್ಜರಿ ಮಾಡಿಸಿಕೊಳ್ಳುವ ಅಗತ್ಯ ಬೀಳಬಹುದು. ದೀರ್ಘಕಾಲದ ನೋವು ಮತ್ತು ಅಂಗವೈಕಲ್ಯ ಇದ್ದವರಿಗೂ ಹಿಪ್ ರಿಪ್ಲೇಸ್‌ಮೆಂಟ್ ಸರ್ಜರಿಯಿಂದ ಪ್ರಯೋಜನ ಕಾಣಬಹುದು.

## ರೊಬೋಟಿಕ್ ಸರ್ಜರಿ ಪರಿಣಾಮಕಾರಿ

ಶಸ್ತ್ರಚಿಕಿತ್ಸೆಯ ಸಮಯದಲ್ಲಿ, ರೊಬೋಟಿಕ್ ವ್ಯವಸ್ಥೆಯು ಇದರ ಕಾರ್ಯನಿರ್ವಹಣೆಯ ನೈಜ ಚಿತ್ರ, ಡೇಟಾ ಎಲ್ಲವನ್ನೂ ಒದಗಿಸುತ್ತದೆ. ಸಣ್ಣ ಛೇದನ, ಕಡಿಮೆ ಸಮಯದ ಆಸ್ಪತ್ರೆ ವಾಸ, ತ್ವರಿತ ಚೇತರಿಕೆಯಿಂದ ರೋಗಿಗೆ ಈ ಸುಧಾರಿತ ಶಸ್ತ್ರಚಿಕಿತ್ಸೆ ವರದಾನವೇ ಆಗಿದೆ.

ಸರ್ಜರಿಯ ಬಳಿಕ ಕೆಲವೇ ವಾರಗಳಲ್ಲಿ ವೈದ್ಯರ ಅನುಮತಿ ಪಡೆದು ರೋಗಿ ದೈನಂದಿನ ಚಟುವಟಿಕೆಗಳಿಗೆ ತೆರಳಬಹುದು. ಅದೇ ರೀತಿ ನಿಗದಿತ ವ್ಯಾಯಾಮ, ಮಿತವಾದ ನಡಿಗೆ ಮತ್ತಿತರ ಚಟುವಟಿಕೆಗಳನ್ನು ವೈದ್ಯರ ಸಲಹೆಯಂತೆ ಮಾಡಬೇಕು. ಆದರೆ ಮನೆಯಲ್ಲಿದ್ದುಕೊಂಡು ಸೋಂಕು ತಗುಲದಂತೆ ಎಚ್ಚರ ವಹಿಸಬೇಕು. ಆಗಾಗ ವೈದ್ಯರ ಬಳಿ ತಪಾಸಣೆಯನ್ನೂ ನಡೆಸುತ್ತಿರಬೇಕು.

ಈಗೀಗ ರೊಬೋಟಿಕ್ ಹಿಪ್ ರಿಪ್ಲೇಸ್‌ಮೆಂಟ್ ಸರ್ಜರಿ ಹೆಚ್ಚು ಜನಪ್ರಿಯವಾಗುತ್ತಿದೆ. ಶಸ್ತ್ರಚಿಕಿತ್ಸೆ ಮಾಡುವಾಗ ಸಣ್ಣ ಗಾಯ, ಕಡಿಮೆ ಆಸ್ಪತ್ರೆ ವಾಸ ಹಾಗೂ ನಿಖರವಾದ ಫಲಿತಾಂಶ ಸಿಗುವುದರಿಂದ ಜನರೂ ಇದಕ್ಕೇ ಆದ್ಯತೆ ನೀಡುತ್ತಿದ್ದಾರೆ. ಆದರೆ ಇದು ಜನಸಾಮಾನ್ಯರಿಗೆ ಎಟುಕುವಂಥದ್ದಲ್ಲ. ಈ ಸರ್ಜರಿ ಬಹಳ ದುಬಾರಿಯಾದುದು.